# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No. 100/2025**

**CW : 07 PW: 03**

## ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 13.03.2026

| | |
|---|---|
| ಹೆಸರು | : ಮಹೇಶಕುಮಾರ ಹಿರೇಮಠ |
| ಗಂಡನ ಹೆಸರು | : ಮಾರ್ಖಂಡೇಯ ಹಿರೇಮಠ |
| ವಯಸ್ಸು | : 31 |
| ಉದ್ಯೋಗ | : ಎಸ್..ಐ ಅಬಕಾರಿ |
| ವಾಸಸ್ಥಳ | : ಚಿತ್ತಾಪೂರ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ಚಿತ್ತಾಪೂರ ವಲಯದಲ್ಲಿ ಅಬಕಾರಿ ಉಪ ನಿರೀಕ್ಷಕನು ಎಂದು ದಿ:25/07/2022 ರಿಂದ ಇಲ್ಲಿಯವರೆಗೂ ಕಾರ್ಯ ನಿರ್ವಹಿಸಿತ್ತಿದ್ದೇನೆ. ದಿ: 26/04/2024 ರಂದು ಚಾಸಾ-3 ರವರಿಂದ ಕಡತವನ್ನು ಪಡೆದುಕೊಂಡು ಮುಂದಿನ ತನಿಕೆಯನ್ನು ಕೈಗೊಂಡಿದ್ದು ಇರುತ್ತದೆ. ದಿ: 18/07/2024 ರಂದು ಚಾಸಾ-5 ಇವರಿಗೆ ರಾಸಾಯನಿಕ ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯ ರಾಯಚೂರಿಗೆ ಕಳುಹಿಸಲಾಯಿತು. ಸದರಿ ವರದಿಯನ್ನು ನಾನು ದಿ: 02/08/2024 ರಂದು ಪಡೆದುಕೊಂಡಿದ್ದು ಇರುತ್ತದೆ.

ದಿ: 18/07/2024 ರಂದು ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡಿರುವ ಬೈಕ್ ನಂ.ಕೆ.ಎ-32, ಯು-1747 ನೇದ್ದರ ಬಿ-ಎಕ್ಸ್ರಾಕ್ಟನ್ನು ಪಡೆಯಲು ಆರ್.ಟಿ.ಓ ಗೆ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ನಾನು ದಿ: 20/07/2024 ರಂದು ಆರ್.ಟಿ.ಓ ಅವರಿಂದ ವರದಿಯನ್ನು ಪಡೆದುಕೊಂಡಿದ್ದು ಇರುತ್ತದೆ. ಸದರಿ ವಾಹನವು ಕೆ.ರವೀಂದ್ರ ರೆಡ್ಡಿಯವರಿಗೆ ಸೇರಿರುವುದಾಗಿ ತಿಳಿದು ಬಂದಿದ್ದು ಇರುತ್ತದೆ. ದಿ: 15/11/2024 ರಂದು ಸದರಿ ವ್ಯಕ್ತಿಗೆ ಹಾಜರಾಗಲು ನೋಟೀಸ್ ನೀಡಿದ್ದು ಇರುತ್ತದೆ. ಈ ಪ್ರಕರಣದಲ್ಲಿ ನಾನು ಚಾಸಾ-4 ಮತ್ತು 5 ಇವರ ಹೇಳಿಕೆಯನ್ನು ಪಡೆದುಕೊಂಡಿದ್ದು ಇರುತ್ತದೆ.

ಈ ಕುರಿತಾಗಿ ಆ ವ್ಯಕ್ತಿಯು ಹಾಜರಾಗಿ ನನ್ನದು ಇದರಲ್ಲಿ ಪಾತ್ರ ಇರುವುದಿಲ್ಲ, ನನ್ನ ವಾಹನವನ್ನು ಮಲ್ಲಿಕಾರ್ಜುನ ತಂದೆ ಬಸಲಿಂಗಪ್ಪ ಪಗಲಾಪೂರ ಇವರು ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿದಿದ್ದು ಇರುತ್ತದೆ. ನಂತರ ಪುನ: ನಾನು ತನಿಕೆ ಮಾಡಿದಾಗ ಮೇಲೆ ಹೇಳಿದ ವ್ಯಕ್ತಿಯ ಬಳಿ ಯಾವುದೇ ಪರವಾನಗಿ ಇಲ್ಲದ್ದು ಕಂಡುಬಂದಿತು. ನಂತರ ಮಲ್ಲಿಕಾರ್ಜುನ ಎಂಬುವವರನ್ನು ಠಾಣೆಗೆ ಬರಲು

ನೋಟೀಸನ್ನು ಜಾರಿಗೊಳಿಸಿದ್ದು ಇರುತ್ತದೆ. ಅವರು ದಿ: 26/07/2024 ರಂದು ಠಾಣೆಗೆ ಹಾಜರಾಗಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಿಂದ ಪಡೆದುಕೊಂಡಿರುವ ಜಾಮೀನಿನ ಪತ್ರವನ್ನು ನೀಡಿದ್ದು ಇರುತ್ತದೆ. ಸದರಿ ವ್ಯಕ್ತಿಯು ತನ್ನ ಸ್ವ ಖುಷಿ ಹೇಳಿಕೆಯನ್ನು ನೀಡಿದ್ದು ಇರುತ್ತದೆ. ಅವರ ಹೇಳಿಕೆ ಆಧಾರದ ಮೇಲೆ ನಾನು ರವೀಂದ್ರ ರೆಡ್ಡಿ ಇವರನ್ನು ಚಾರ್ಜ ಶೀಟಿನ ಪೆರಿಯಾಸ್ ನಲ್ಲಿ ಸಾಕ್ಷಿದಾರರನ್ನಾಗಿ ಮಾಡಿದ್ದು ಇರುತ್ತದೆ. ದಿ: 29/11/2024 ರಂದು ಸಾಕಷ್ಟು ಸಾಕ್ಷ್ಯಾಧಾರಗಳು ಇರುವ ಕಾರಣ ಆರೋಪಿತನ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದು ಇರುತ್ತದೆ.

ಎಫ್.ಎಸ್.ಎಲ್. ವರದಿಯನ್ನು ನೋಡಿ ಗುರುತಿಸಲಾಗಿ, ಅದನ್ನು ನಿ.ಪಿ.2 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.2 (ಎ) ಎಂದು, ಪ್ರಾದೇಶಕ ಸಾರಿಗೆ ಅಧಿಕಾರಿ ಇವರಿಗೆ ಬರೆದ ಅರ್ಜಿಯನ್ನು ನೋಡಿ ಗುರುತಿಸಲಾಗಿ, ಅದನ್ನು ನಿ.ಪಿ.3 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.3 (ಎ) ಎಂದು, ಸದರಿ ಸಾರಿಗೆ ವ್ಯವಸ್ಥೆಯವರಿಂದ ಪಡೆದುಕೊಂಡಿರುವ ವರದಿಯನ್ನು ನೋಡಿ ಗುರುತಿಸಲಾಗಿ, ಅದನ್ನು ನಿ.ಪಿ.4 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.4 (ಎ) ಎಂದು, ಚಾಸಾ-8 ಇವರಿಗೆ ಸಲ್ಲಿಸಿರುವ ನೋಟೀಸನ್ನು ನೋಡಿ ಗುರುತಿಸಲಾಗಿ, ಅದನ್ನು ನಿ.ಪಿ.5 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.5 (ಎ) ಎಂದು, ಚಾಸಾ-8 ಅವರ ಹೇಳಿಕೆಯನ್ನು ನೋಡಿ ಗುರುತಿಸಲಾಗಿ, ಅದನ್ನು ನಿ.ಪಿ.5 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.6 (ಎ) ಎಂದು, ತನಿಕೆಗೆ ಹಾಜರಾಗಲು ಆರೋಪಿಗೆ ಕಳುಹಿಸಿರುವ ನೋಟೀಸನ್ನು ನೋಡಿ ಗುರುತಿಸಲಾಗಿ, ಅದನ್ನು ನಿ.ಪಿ.7 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.7 (ಎ) ಎಂದು, ಆರೋಪಿಯ ಸ್ವ ಖುಷಿ ಹೇಳಿಕೆಯನ್ನು ನೋಡಿ ಗುರುತಿಸಲಾಗಿ, ಅದನ್ನು ನಿ.ಪಿ.8 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.8 (ಎ) ಎಂದು, ನಿಶಾನೆಗೊಳಿಸಲಾಯಿತು.

ಪ್ರಕರಣದಲ್ಲಿ ಜಪ್ತುಪಡಿಸಿಕೊಂಡಿರುವ ಎರಡು ಕಿಂಗ ಫಿಷರ್ ಟಿನಗಳನ್ನು ನೋಡಿ ಗುರುತಿಸಲಾಗಿ, ಅವುಗಳನ್ನು ಮು.ಮಾ.1 ಎಂದು, 4 ಕಿಂಗ ಫಿಷರ್ ಬಿಯರ ಬಾಟಲಿಗಳನ್ನು ನೋಡಿ ಗುರುತಿಸಲಾಗಿ, ಅವುಗಳನ್ನು ಒಟ್ಟಾರೆ ಮು.ಮಾ.2 ಎಂದು, 4 ಪವರ ಕೂಲ್ ಬಿಯರ ಬಾಟಲಿಗಳನ್ನು ನೋಡಿ ಗುರುತಿಸಲಾಗಿ, ಅವುಗಳನ್ನು ಒಟ್ಟಾಗಿ ಮು.ಮಾ.3 ಎಂದು, 180 ಎಮ್.ಎಲ್.ನ 14 ಬ್ಯಾಗ ಪೈಪರ ವಿಸ್ಕಿಯ ಟೆಟ್ರಾ ಪ್ಯಾಕಗಳನ್ನು ನೋಡಿ ಗುರುತಿಸಲಾಗಿ, ಅವುಗಳನ್ನು ಒಟ್ಟಾರೆ ಮು.ಮಾ4 ಎಂದು, 14

ಒರಿಜಿನಲ್ ಚಾಯ್ಸ ವಿಸ್ಕಿಯ ಟೆಟ್ರಾ ಪ್ಯಾಕಗಳನ್ನು ನೋಡಿ ಗುರುತಿಸಲಾಗಿ, ಅವುಗಳನ್ನು ಒಟ್ಟಾರೆ ಮು.ಮಾ.5 ಎಂದು ನಿಶಾನೆಗೊಳಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.</u>**

ದಿ: 26/04/2024 ರಂದು ಚಾಸಾ-3 ರವರಿಂದ ಕಡತವನ್ನು ಪಡೆದುಕೊಂಡು ಮುಂದಿನ ತನಿಕೆಯನ್ನು ಕೈಗೊಂಡಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ದಿ: 18/07/2024 ರಂದು ಚಾಸಾ-5 ಇವರಿಗೆ ರಾಸಾಯನಿಕ ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯ ರಾಯಚೂರಿಗೆ ಕಳುಹಿಸಲಾಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವರದಿಯನ್ನು ನಾನು ದಿ: 02/08/2024 ರಂದು ಪಡೆದುಕೊಂಡಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ: 18/07/2024 ರಂದು ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡಿರುವ ಬೈಕ್ ನಂ.ಕೆ.ಎ-32, ಯು-1747 ನೇದ್ದರ ಬಿ-ಎಕ್ಸ್ಟ್ರಾಕ್ಟನ್ನು ಪಡೆಯಲು ಆರ್.ಟಿ.ಓ ಗೆ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.. ನಾನು ದಿ: 20/07/2024 ರಂದು ಆರ್.ಟಿ.ಓ ಅವರಿಂದ ವರದಿಯನ್ನು ಪಡೆದುಕೊಂಡಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ..  ಸದರಿ ವಾಹನವು ಕೆ.ರವೀಂದ್ರ ರೆಡ್ಡಿಯವರಿಗೆ ಸೇರಿರುವುದಾಗಿ ತಿಳಿದು ಬಂದಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ..  ದಿ: 15/11/2024 ರಂದು ಸದರಿ ವ್ಯಕ್ತಿಗೆ ಹಾಜರಾಗಲು ನೋಟೀಸ್ ನೀಡಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಈ ಪ್ರಕರಣದಲ್ಲಿ ನಾನು ಚಾಸಾ-4 ಮತ್ತು 5 ಇವರ ಹೇಳಿಕೆಯನ್ನು ಪಡೆದುಕೊಂಡಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಕುರಿತಾಗಿ ಆ ವ್ಯಕ್ತಿಯು ಹಾಜರಾಗಿ ನನ್ನದು ಇದರಲ್ಲಿ ಪಾತ್ರ ಇರುವುದಿಲ್ಲ, ನನ್ನ ವಾಹನವನ್ನು ಮಲ್ಲಿಕಾರ್ಜುನ ತಂದೆ ಬಸಲಿಂಗಪ್ಪ ಪಗಲಾಪೂರ ಇವರು ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿದಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಂತರ ಪುನ: ನಾನು ತನಿಕೆ ಮಾಡಿದಾಗ ಮೇಲೆ ಹೇಳಿದ ವ್ಯಕ್ತಿಯ ಬಳಿ ಯಾವುದೇ ಪರವಾನಗಿ ಇಲ್ಲದ್ದು ಕಂಡುಬಂದಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ಮಲ್ಲಿಕಾರ್ಜುನ ಎಂಬುವವರನ್ನು ಠಾಣೆಗೆ ಬರಲು ನೋಟೀಸನ್ನು ಜಾರಿಗೊಳಿಸಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.. ಅವರು ದಿ: 26/07/2024 ರಂದು ಠಾಣೆಗೆ ಹಾಜರಾಗಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಿಂದ ಪಡೆದುಕೊಂಡಿರುವ ಜಾಮೀನಿನ ಪತ್ರವನ್ನು ನೀಡಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಯು ತನ್ನ ಸ್ವ ಖುಷಿ ಹೇಳಿಕೆಯನ್ನು ನೀಡಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ಹೇಳಿಕೆ ಆಧಾರದ ಮೇಲೆ ನಾನು ರವೀಂದ್ರ ರೆಡ್ಡಿ ಇವರನ್ನು ಚಾರ್ಜ ಶೀಟಿನ ಪೆರಿಯಾಸ್ ನಲ್ಲಿ ಸಾಕ್ಷಿದಾರರನ್ನಾಗಿ ಮಾಡಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ: 29/11/2024 ರಂದು ಸಾಕಷ್ಟು ಸಾಕ್ಷ್ಯಾಧಾರಗಳು ಇರುವ ಕಾರಣ ಆರೋಪಿತನ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 5 ಇವುಗಳು ಎಲ್ಲ ಖಾಲಿ ಇರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಮು.ಮಾ.1 ರಿಂದ 5 ಇವುಗಳು ಸ್ಕ್ರ್ಯಾಪಿನಲ್ಲಿ ಹೇರಳವಾಗಿ ಸಿಗುತ್ತವೆ ಎಂದರೆ ಸಿಗುವುದಿಲ್ಲ ಎಂದು ನುಡಿಯುತ್ತಾರೆ.

ನಡೆದ ಘಟನೆಗೂ ಹಾಗೂ ಆರೋಪಿತಗೂ ಸಂಬಂಧ ಇಲ್ಲದಿದ್ದರೂ ಸಹ ನಾನು ಠಾಣೆಯ ಅಂಕಿಸಂಖ್ಯೆಗೋಸ್ಕರ ಈ ಖೊಟ್ಟಿ ದೋಷಾರೋಪಣೆಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಪ್ರಕರಣಕ್ಕೂ ಮತ್ತು ಮುದ್ದೆ ಮಾಲಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗೆ ಬೆಂಬಲಿಸಿ ನಾನು ಸುಳ್ಳು ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

Sd/-
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**